ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೧೪ನೇ ಮಾರ್ಚಿ ೧೯೮೬. ಫಾಲ್ಗುಣ ೨೩, ೧೯೦೭. ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಂಡಿತು.

[ಪ್ರಾರ್ಥನಾ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು.—ಈಗ ವರದಿಗಳನ್ನೊಪ್ಪಿಸುವುದು.

ಶ್ರೀ ಎಸ್. ಕೆ. ಕಾಂತಾ.—ಅಧ್ಯಕ್ಷರೇ, ಸರ್ಕಾರಿ ಕಂಪನಿಗಳ ಹಾಗೂ ಶಾಸನಬದ್ಧ ಸಂಸ್ಥೆಗಳ ಅಧ್ಯಕ್ಷರಂಗಳು, ಆಡಳಿತ ನಿರ್ದೇಶಕರಂಗಳು, ಹಾಗೂ ಸರ್ಕಾರಿ ಅಧಿಕಾರಿಗಳು ೧೯೭೮ನೇ ಏಪ್ರಿಲ್ ನಿಂದ ೧೯೮೫ನೇ ಮೇ ತಿಂಗಳವರೆವಿಗೂ ಕೈಗೊಂಡ ವಿದೇಶ ಪ್ರವಾಸಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ೫೪ನೆಯ ವರದಿಯನ್ನು ಒಪ್ಪಿಸುತ್ತೇನೆ.

ಶ್ರೀಮತಿ ವಂಕ್ಕರ್ ಉನ್ನಿಸಾ (ಶ್ರೀ ಎಂ. ಎಲ್. ಮುತ್ತಣ್ಣನವರ್‌ರವರ ಪರವಾಗಿ).—ಅಧ್ಯಕ್ಷರೇ, ಹಿಂದುಳಿದ ವರ್ಗದವರಿಗೆ ಸರ್ಕಾರಿ ಸೇವೆಗೆ ನೇಮಕಾತಿಯಲ್ಲಿನ ವಿಶೇಷಾತಿಗೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಎರಡನೆಯ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು

ವಿತ್ತೀಯ ಕಾರ್ಯ ಕಲಾಪಗಳು.

೧೯೮೬-೮೭ನೇ ಸಾಲಿಗೆ ಸಂಬಂಧಪಟ್ಟ ಅನುದಾನಗಳ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ ತೆರಿಗೆಗಳು. ಆಡಳಿತ. ಚುನಾವಣೆ ರಾಜ್ಯಪಾಲರು ಮತ್ತಿತರ ಮುಖ್ಯ ಮಂತ್ರಿಯವರ ಇಲಾಖಾ ಬೇಡಿಕೆಗಳ ಮೇಲಿನ ಬೇಡಿಕೆಗಳು

†**ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).**—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಯವರು ಮತ್ತು ವಿದ್ಯುತ್, ಗಣಿ ಮಂತ್ರಿ ಭೂ ವಿಜ್ಞಾನ ಇಲಾಖೆಯ ಸಚಿವರು ಈ ಸದನದ ಮುಂದೆ ಇಟ್ಟ ಬೇಡಿಕೆಗಳ ವಿಚಾರದಲ್ಲಿ ನಿನ್ನೆಯಿಂದ ಬಹಳವಾಗಿ ಚರ್ಚೆ ನಡೆಯುತ್ತಾ ಇದೆ. ನಾನು ಪ್ರಥಮತ ಅರ್ಥ ಶಾಖೆಯ ವಿಚಾರದಲ್ಲಿ ಕೆಲವು ವಿಚಾರಗಳನ್ನು ಮಾತ್ರ ಸಭೆಯ ಮುಂದೆ ಇಡುತ್ತೇನೆ. ಏಕೆಂದರೆ, ಬಜೆಟ್ ಮೇಲೆ ಚರ್ಚೆಯಾಗುವಾಗ ಸಾಮಾನ್ಯವಾದ ಒಂದು ಚರ್ಚೆ ಆಗಿರುತ್ತದೆ. ಹಾಗೂ ರಾಜ್ಯಪಾಲರ ಭಾಷಣದ ಮೇಲೆ ಕೂಡಾ ಈ ವಿಷಯ ಚರ್ಚೆಯಾಗಿದೆ. ಆದುದರಿಂದ ಈ ಬಗೆ

† ಈ ಚಿಹ್ನೆ ಸಂಭಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.